## ನಿಮ್ಮೊಡನೆ

# ವಿಪತ್ತು ನಿರ್ವಹಣೆಯ ಸವಾಲು

ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ವರ್ಷ ಜನವರಿಯಲ್ಲಿ ಪುನರ್‌ರಚನೆಗೊಂಡ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಆಗಿನಿಂದಲೂ ಒಮ್ಮೆಯೂ ಸಭೆ ಸೇರಿಲ್ಲ ಎಂಬುದೇ ವಿಪರ್ಯಾಸ. ಜನವರಿ 3ರಂದು ಅಸ್ತಿತ್ವಕ್ಕೆ ಬಂದ 11 ಸದಸ್ಯರ ಸದ್ಯದ ಪ್ರಾಧಿಕಾರ ಬರೀ ಕಾಗದದಲ್ಲಷ್ಟೇ ಉಳಿದಿದೆ ಎಂಬುದು ನಮ್ಮ ಆಡಳಿತಶಾಹಿಯ ಕಾರ್ಯ ವೈಖರಿಗೆ ಉದಾಹರಣೆ.

ಉತ್ತರ ಕರ್ನಾಟಕದ ನೆರೆ ಹಾವಳಿಗೆ ಜನತೆ ನಲುಗಿ ಹೋಗಿದ್ದಾರೆ. ಪ್ರೀತಿಪಾತ್ರರನ್ನು ಕಳೆದುಕೊಂಡ ಸಾವು ನೋವುಗಳ ಜೊತೆಗೇ ಸ್ವಂತ ಸೂರುಗಳಿಲ್ಲದ ಅತಂತ್ರ ಸ್ಥಿತಿಯಲ್ಲಿ ಲಕ್ಷಾಂತರ ಜನರು ಸಿಲುಕಿದ್ದಾರೆ. ಬೆಳೆದ ಬೆಳೆ ನಾಶವಾಗಿದೆ. ಹಳ್ಳಿಗೆ ಹಳ್ಳಿಗಳೇ ಕೊಚ್ಚಿ ಹೋಗಿವೆ. ಹಸಿವು, ನೀರಡಿಕೆಗಳೊಂದಿಗೆ ಭಗ್ನಾವಶೇಷಗಳ ಮಧ್ಯೆ ಬದುಕು ಅರಸುವ ಸಂಕಟಮಯ ಸ್ಥಿತಿ ಇದು. ಸಂಕಷ್ಟದಲ್ಲಿ ಸಿಲುಕಿದ ಜನರ ನೋವುಗಳಿಗೆ ಸ್ಪಂದಿಸಿ ನಾನಾ ರೀತಿಯಲ್ಲಿ ನೆರವು ದೊರಕಿಸಿಕೊಡುವ ಪ್ರಯತ್ನಗಳೂ ನಡೆಯುತ್ತಿವೆ. ಉದಾರ ನೆರವು ಹರಿದು ಬರುತ್ತಿರುವ ಬಗ್ಗೆ ಮಾಧ್ಯಮಗಳಲ್ಲೂ ವರದಿಯಾಗುತ್ತಿದೆ. ಇದೆಲ್ಲಾ ಸರಿ. ಇಂತಹ ಭಾರಿ ವಿಪತ್ತಿನ ಸಂದರ್ಭದಲ್ಲಿ, ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪಾತ್ರವೇನು ಎಂಬ ಪ್ರಶ್ನೆ ಏಳುವುದು ಸಹಜ.

ನಿಮಗೆ ನೆನಪಿರಬಹುದು. 2005ರಲ್ಲಿ ವಿಪತ್ತು ನಿರ್ವಹಣಾ ಕಾಯಿದೆಯನ್ನು ಸಂಸತ್ತು ಅಂಗೀಕರಿಸಿತು. ಈ ಕಾಯಿದೆಯ ಅನುಸಾರ ರಾಷ್ಟ್ರೀಯ, ರಾಜ್ಯ  ಹಾಗೂ ಜಿಲ್ಲಾ ಮಟ್ಟಗಳಲ್ಲಿ ವಿಪತ್ತು ನಿರ್ವಹಣಾ ಪ್ರಾಧಿಕಾರಗಳು ರಚನೆಯಾಗಬೇಕು. ನೈಸರ್ಗಿಕ ಪ್ರಕೋಪಗಳಿಗೆ ಸಿಲುಕಬಹುದಾದಂತಹ ಪ್ರದೇಶಗಳಲ್ಲಿರುವ ಜನರಿಗೆ ಆ ಬಗ್ಗೆ ಜಾಗೃತಿ ಮೂಡಿಸುವುದು ಇದರ ಉದ್ದೇಶ. ಜೊತೆಗೇ ವಿಪತ್ತುಗಳ ಸಂದರ್ಭದಲ್ಲಿ ಸಂಘಟಿತವಾಗಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವುದೂ ಇದರ ವ್ಯಾಪ್ತಿಗೆ ಬರುತ್ತದೆ. ಈಗ ಉತ್ತರ ಕರ್ನಾಟಕದ ಜನತೆ ಎದುರಿಸುತ್ತಿರುವಂತಹ ಪ್ರವಾಹ ಪ್ರಕೋಪಗಳ ನಿರ್ವಹಣೆಯ ಯೋಜನೆ, ಸಮನ್ವಯ ಹಾಗೂ ಅನುಷ್ಠಾನದ ಹೊಣೆಯೂ ಇಂತಹ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ.

ಹಾಗಾದರೆ ಕರ್ನಾಟಕದಲ್ಲಿ ಈ ಪ್ರಾಧಿಕಾರ ಏನು ಮಾಡುತ್ತಿದೆ? ಎಂಬ ಪ್ರಶ್ನೆ ಸಹಜ. ಆದರೆ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಈ ವರ್ಷ ಜನವರಿಯಲ್ಲಿ ಪುನರ್‌ರಚನೆಗೊಂಡ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಆಗಿನಿಂದಲೂ ಒಮ್ಮೆಯೂ ಸಭೆ ಸೇರಿಲ್ಲ ಎಂಬುದೇ ವಿಪರ್ಯಾಸ. ಜನವರಿ 3ರಂದು ಅಸ್ತಿತ್ವಕ್ಕೆ ಬಂದ 11 ಸದಸ್ಯರ ಸದ್ಯದ ಪ್ರಾಧಿಕಾರ ಬರೀ ಕಾಗದದಲ್ಲಷ್ಟೇ ಉಳಿದಿದೆ ಎಂಬುದು ನಮ್ಮ ಆಡಳಿತಶಾಹಿಯ ಕಾರ್ಯ ವೈಖರಿಗೆ ಉದಾಹರಣೆ.

2004ರಲ್ಲಿ ಭಾರತದ ದಕ್ಷಿಣ ರಾಜ್ಯಗಳು ಹಾಗೂ ಆಗ್ನೇಯ ಏಷ್ಯಾ ರಾಷ್ಟ್ರಗಳನ್ನು ಅಪ್ಪಳಿಸಿದ ಸುನಾಮಿ, ಜನರ ಬದುಕನ್ನು ಭಾರಿ ಪ್ರಮಾಣದಲ್ಲಿ ತತ್ತರಗೊಳಿಸಿತು. ನಂತರ ಅಮೆರಿಕದಲ್ಲಿ ಕಟ್ರಿನಾ, ರೀಟಾ ಚಂಡಮಾರುತ ;  ಪಾಕಿಸ್ತಾನ, ಭಾರತಗಳಲ್ಲಿ ಭೂಕಂಪಗಳ ಸರಮಾಲೆ ಬದುಕನ್ನು ಮೂರಾಬಟ್ಟೆ ಮಾಡಿತು. ಈ ಎಲ್ಲಾ ನೈಸರ್ಗಿಕ ಅವಘಡಗಳು, ವಿಪತ್ತು ನಿರ್ವಹಣೆಯಲ್ಲಿ ಮಾನವ ಹಕ್ಕುಗಳ ರಕ್ಷಣೆಯ ಮಹತ್ವದತ್ತ ಬೆರಳು ಮಾಡಿತು. ಈ ಹಿನ್ನೆಲೆಯಲ್ಲಿ ವಿಪತ್ತು ನಿರ್ವಹಣೆಯ ಸನ್ನದ್ಧತೆ ಒಳ್ಳೆಯ ಆಡಳಿತದ ಮುಖ್ಯ ಭಾಗವಾಗಿರಬೇಕು ಎಂಬಂತಹ ಚಿಂತನೆಗೆ ಬಲ ಬಂದಿತು. ಏಕೆಂದರೆ ನೈಸರ್ಗಿಕ ಅವಘಡಗಳು ಸಂಭವಿಸಿದಾಗ ಅದು ಬೀರುವ ಪರಿಣಾಮ ವ್ಯಾಪಕವಾದದ್ದು. ಸಾವುನೋವು, ಆಸ್ತಿಪಾಸ್ತಿ ನಷ್ಟ ಅಪಾರವಾಗಿರುತ್ತದೆ. ಹೀಗಾಗಿ ಮುಂಜಾಗ್ರತಾ ಕ್ರಮಗಳು ಅತಿ ಮುಖ್ಯ.

ರಾಜ್ಯದಲ್ಲಿ ನೈಸರ್ಗಿಕ ಅವಘಡಗಳು ಎಂದರೆ ಸಾಮಾನ್ಯವಾಗಿ ಬರ ಹಾಗೂ ಪ್ರವಾಹ ನಿರ್ವಹಣೆ ಮುಖ್ಯವಾಗಿರುತ್ತದೆ. ಜೊತೆಗೇ, ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಂತಹ ಕರಾವಳಿ ಪ್ರದೇಶಗಳು ಎದುರಿಸುವ ಸುನಾಮಿ ಅಥವಾ ಕಡಲ್ಕೊರೆತದಂತಹ ಸಮಸ್ಯೆಗಳೂ ರಾಜ್ಯ ಎದುರಿಸುವ ಕೆಲವು ನೈಸರ್ಗಿಕ  ಅಪಾಯಗಳಲ್ಲಿ ಸೇರಿವೆ. ಈ ಬಗ್ಗೆ ಯೋಜನೆ ಸಿದ್ಧಪಡಿಸಿ ಸಂಬಂಧಿಸಿದ ವಿವಿಧ ಇಲಾಖೆಗಳಿಗೆ ಜವಾಬ್ದಾರಿ  ನಿಗದಿ ಪಡಿಸಿ ಆಡಳಿತಯಂತ್ರವನ್ನು ಸನ್ನದ್ಧವಾಗಿರಿಸಬೇಕೆಂಬ ಆಶಯವನ್ನು ವಿಪತ್ತು ನಿರ್ವಹಣಾ ಪ್ರಾಧಿಕಾರ ಸಾಕಾರಗೊಳಿಸಬೇಕಿದೆ. ಈ ಬಗ್ಗೆ ಸಮಗ್ರ ಯೋಜನೆಯನ್ನು ಕಚೇರಿಗಳಲ್ಲಷ್ಟೇ  ಕುಳಿತು ಅಧಿಕಾರಿಗಳು ಸಿದ್ಧಪಡಿಸುವುದು ಸಾಧ್ಯವಿಲ್ಲ. ವಿಪತ್ತು ನಿರ್ವಹಣೆಯಲ್ಲಿ  ಅನುಭವವುಳ್ಳ ತಜ್ಞರ ಜೊತೆ ಸಮಾಲೋಚನೆಯ ನಂತರವೇ ಇಂತಹ ಯೋಜನೆ ರೂಪಿಸಬೇಕು. ವಿಪತ್ತು ತಡೆಗೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಜೊತೆಗೇ ಅವಘಡಗಳು ಸಂಭವಿಸಿದಲ್ಲಿ ಅದರ ಪರಿಣಾಮಗಳ ಭೀಕರತೆಯನ್ನು ತಗ್ಗಿಸಲು ಕೈಗೊಳ್ಳಬಹುದಾದ ಯೋಜನೆಗಳನ್ನು ರೂಪಿಸಿ ಆಡಳಿತಯಂತ್ರವನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಬೇಕಾದ ಹೊಣೆಗಾರಿಕೆ ಹಾಗೂ ಸೂಕ್ಷ್ಮತೆಗಳನ್ನು ನಮ್ಮ ಆಡಳಿತ ವಿಧಾನಗಳು ಪ್ರದರ್ಶಿಸಬೇಕಿದೆ. ಈ ದಿಸೆಯಲ್ಲಿ ಆಡಳಿತ ವಿಧಾನ ಚುರುಕಾಗಿರುವುದಷ್ಟೇ ಅಲ್ಲದೆ ಸಂವೇದನಾಶೀಲ ಮಾನವೀಯತೆಯ ಸ್ಪಂದನವನ್ನೂ ಹೊಂದಿರಬೇಕಾದುದು ಅಗತ್ಯ.

■ ಸಿ. ಜಿ. ಮಂಜುಳಾ



ಸಾಂಗಳೇಕರ್